## ತೀರ್ಮಾನ

ಪಂಕಜಾ ಗಂಡ ಪರಮೇಶಿಗೆ 'ಚೆನ್ನಾಗಿ ಯೋಚಿಸಿ ಒಂದು ತೀರ್ಮಾನಕ್ಕೆ ಬನ್ನಿ' ಎಂದು ಮೂರು ದಿನಗಳ ಗಡುವು ನೀಡಿದ್ದಳು. ಪರಮೇಶಿ ಮೂರು ದಿನ ಹಗಲೂ ರಾತ್ರಿ ಎನ್ನದೇ ಯೋಚಿಸಿದ. ಅಪರೂಪಕ್ಕೆ ಹೆಂಡತಿ ತನಗೆ ನಿರ್ಧಾರ ತೆಗೆದುಕೊಳ್ಳಲು ತಿಳಿಸಿದ್ದಾಳೆ. ಚೆನ್ನಾಗಿ ಯೋಚಿಸಬೇಕು ಎನ್ನುವುದು ಅವನ ಹಟವಾಗಿತ್ತು. ಮೂರು ದಿನ ಕಳೆದ ಮೇಲೆ, 'ರೀ, ಚೆನ್ನಾಗಿ ಯೋಚಿಸಿ ಒಂದು ತೀರ್ಮಾನಕ್ಕೆ ಬನ್ನಿ ಅಂತ ಮೂರು ದಿನಗಳ ಹಿಂದೆ ಹೇಳಿದ್ದೆ... ಯೋಚನೆ ಮಾಡಿದ್ರಾ?' ಎಂದು ವಿಚಾರಿಸಿದಳು.

'ಹೌದು ಕಣೆ, ತುಂಬಾನೇ ಯೋಚಿಸಿ ನಿರ್ಧಾರ ತೆಗೆದುಕೊಂಡಿದ್ದೀನಿ... ಅವರನ್ನು ಕರೆದುಕೊಂಡು ಬರೋಣ ಅಂತ...' ಎಂದ. ಇವನ ಮಾತು ಮುಗಿಯುವ ಮೊದಲೇ ಅವಳು, 'ನಿಮಗೆ ತಲೆ ಸರಿ ಉಂಟಾ? ಸುಮ್ನೇ ಬಾಯಿ ಮುಚ್ಕೊಂಡು ನಾನು ಹೇಳಿದ ಹಾಗೆ ಕೇಳಿ' ಎಂದು ಗದರಿದಳು. ಪರಮೇಶಿಗೆ ನಿರಾಸೆಯಾಯಿತು. 'ಅಯ್ಯೋ ನಿನ್ನ, ಯೋಚನೆ ಮಾಡಿ ಅಂತ ಹೇಳಿ ಮೂರು ದಿನ ಸುಮ್ ಸುಮ್ನೆ ತಲೆ ಬಿಸಿ ಮಾಡಿಸಿದೆಯಲ್ಲೇ, ಮೊದಲೇ ಈ ಮಾತು ಹೇಳಿದ್ದರೆ ನಾನು ಅಷ್ಟೆಲ್ಲಾ ಯೋಚಿಸೋದಾದ್ರೂ ತಪ್ಪೋದು' ಎಂದ.

**ರೇಖಾ ಹಾಲಾಡಿ**





ಕಲೆ: ಗಣೇಶ ಆಚಾರ್ಯ

## ಮೊದಲ ಮಗು

ಸಾಂಪ್ರ ಗಡಿಬಿಡಿಯಲ್ಲಿ ಆಸ್ಪತ್ರೆಗೆ ಫೋನ್ ಮಾಡಿದ. ಮೂರ್ನಾಲ್ಕು ಸಲ ರಿಂಗ್ ಆದರೂ ಯಾರೂ ಫೋನ್ ತೆಗೆಯಲಿಲ್ಲ. ಗಾಬರಿಯಾದ ಸಂಪ್ರ ಮತ್ತೆ ಪ್ರಯತ್ನಿಸಿದ. ಕಡೆಗೆ ಒಬ್ಬರು ಫೋನ್ ಎತ್ತಿದರು. 'ಡಾಕ್ಟ್ರೇ, ನನ್ನ ಹೆಂಡ್ತಿಗೆ ಹೆರಿಗೆ ಬೇನೆ ಜೋರಾಗಿದೆ... ಸ್ವಲ್ಪ ಬೇಗ ಏನಾದ್ರೂ ವ್ಯವಸ್ಥೆ ಮಾಡಿ' ಎಂದ. ಆಸ್ಪತ್ರೆಯ ಸಿಬ್ಬಂದಿ, 'ಆಯ್ತು, ನಿಮ್ಮ ಮನೆ ಎಲ್ಲಿ ಬರುತ್ತೆ?' ಎಂದು ಕೇಳಿದರು. ಆತ ಹೇಳಿದ. 'ಇದು ಅವಳ ಮೊದಲ ಮಗುವಾ?' ಎಂದರು. ಸಾಂಪ್ರ, 'ಇಲ್ಲ ಡಾಕ್ಟ್ರೇ, ನಾನು ಅವಳ ಗಂಡ ಮಾತಾಡ್ತಾ ಇರೋದು' ಎಂದ.

**ಮಂಡ್ಯ ಮ.ನಾ. ಉಡುಪ**